JANUARY 26, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಮುಖ್ಯಾಂಶಗಳು

- 'ರಾಷ್ಟ್ರ ಮೊದಲು' ಎಂಬ ಮನೋಭಾವದೊಂದಿಗೆ ಒಟ್ಟಾಗಿ ಕಾರ್ಯ ನಿರ್ವಹಿಸುವಂತೆ ರಾಷ್ಟ್ರಪತಿ ಜನತೆಗೆ ಕರೆ.
- ಶ್ರೇಷ್ಠತೆಗೆ ಪ್ರಾಶಸ್ತ್ಯ ನೀಡುವಂತೆ ನವೋದ್ಯಮಗಳಿಗೆ ಪ್ರಧಾನಮಂತ್ರಿ ಆಗ್ರಹ.
- 77ನೇ ಗಣರಾಜ್ಯೋತ್ಸವ; ನಾಡಿನೆಲ್ಲೆಡೆ ಸಂಭ್ರಮ. ಪ್ರಧಾನ ಸಮಾರಂಭಕ್ಕೆ ಸಜ್ಜಾದ ಬೆಂಗಳೂರಿನ ಮಾಣಿಕ್ ಾ ಪರೇಡ್ ಮೈದಾನ.
- ಪ್ರಸಕ್ತ ಸಾಲಿನ ಪದ್ಮಶ್ರೀ ಪ್ರಶಸ್ತಿ ಪ್ರಕಟ; ರಾಜ್ಯದ ಮೂವರು ಸೇರಿದಂತೆ, ಒಟ್ಟು 54 ಗಣ್ಯರಿಗೆ ಗೌರವ.

ಈಗ ವಾರ್ತೆಗಳ ವಿವರ

ನಾವೆಲ್ಲರೂ ರಾಷ್ಟ್ರ ಮೊದಲು ಎಂಬ ಮನೋಭಾವದೊಂದಿಗೆ ಒಟ್ಟಾಗಿ ಕಾರ್ಯ ನಿರ್ವಹಿಸೋಣ ಮತ್ತು ನಮ್ಮ ಗಣರಾಜ್ಯವನ್ನು ಇನ್ನಷ್ಟು ವೈಭವಯುತವಾಗಿ, ಗೌರವಯುತವಾಗಿಸೋಣ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಜನತೆಗೆ ಕರೆ ನೀಡಿದ್ದಾರೆ. ಗಣರಾಜ್ಯೋತ್ಸವದ ಮುನ್ನಾ ದಿನವಾದ ನಿನ್ನೆ ದೇಶದ ಜನತೆಯನ್ನುದ್ದೇಶಿಸಿ ಭಾ ಣ ಮಾಡಿದ ಅವರು, 77ನೇ ಗಣರಾಜ್ಯೋತ್ಸವದ ಶುಭಾಶಯ ಕೋರಿದರು.

<><><>

ಧ್ವನಿ– ದ್ರೌಪದಿ ಮುರ್ಮು ( 55 ಸೆಕೆಂದುಗಳು)

<><><>

ವಿಶೇಷವಾಗಿ ಕೈಗಾರಿಕೆ ಮತ್ತು ನವೋದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಯುವಕರು ಶ್ರೇಷ್ಠತೆಯನ್ನು ಮಾನದಂಡವನ್ನಾಗಿಸಿಕೊಂಡು, ತಾವು ಉತ್ಪಾದಿಸುವ ಪ್ರತಿಯೊಂದು ವಸ್ತುವಿನ ಗುಣಮಟ್ಟವನ್ನು ಸುಧಾರಿಸಲು ಸಂಕಲ್ಪ ಗೈಯ್ಯುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಆಕಾಶವಾಣಿಯ ಜನಪ್ರಿಯ ಮನ ಕಿ ಬಾತ್ ನ, 130 ನೇ ಆವೃತ್ತಿಯಲ್ಲಿ ದೇಶ ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತದ ಆರ್ಥಿಕತೆ ವೇಗವಾಗಿ ಮುಂದುವರಿಯುತ್ತಿರುವ ಹಿನ್ನೆಲೆ, ಪ್ರಪಂಚವೇ ಭಾರತದ ಮೇಲೆ ದೃಷ್ಟಿ ನೆಟ್ಟಿದೆ. ಇಂತಹ ವೇಳೆ, ಗುಣಮಟ್ಟಕ್ಕೆ ಪ್ರಾಶಸ್ತ್ಯ ನೀಡಬೇಕು ಎಂದರು.

ಧ್ವನಿ – ಪ್ರಧಾನಮಂತ್ರಿ (37 ಸೆಕೆಂದುಗಳು)

ಇಂದಿನ ಯುವಕರು ತಮ್ಮ ಅನುಭವಗಳಲ್ಲಿ ಮತ್ತು ಜೀವನಶೈಲಿಯಲ್ಲಿ ಭಕ್ತಿಯನ್ನು ಅಳವಡಿಸಿಕೊಂಡಿದ್ದಾರೆ. ಈ ಚಿಂತನೆಯು ಹೊಸ ಸಾಂಸ್ಕೃತಿಕ ಪ್ರವೃತ್ತಿಗೆ ನಾಂದಿ ಹಾಡಿದೆ. ದೇಶಾದ್ಯಂತ ವಿವಿಧ ನಗರಗಳಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗೂಡುತ್ತಿದ್ದಾರೆ ಎಂದರು.

ಧ್ವನಿ – ಪ್ರಧಾನಮಂತ್ರಿ ( 54 ಸೆಕೆಂದುಗಳು)

ಗಣರಾಜ್ಯೋತ್ಸವ ದಿನವಾದ ಇಂದು ನಮ್ಮ ಸಂವಿಧಾನದ ನಿರ್ಮಾತೃಗಳಿಗೆ ಗೌರವ ಸಲ್ಲಿಸಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

<><><>

ನವದೆಹಲಿಯಲ್ಲಿ ಇಂದು ನಡೆಯಲಿರುವ 77ನೇ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಹಾವೇರಿಯ ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯದ ಎನ್.ಎಸ್.ಎಸ್ ಸ್ವಯಂಸೇವಕಿ ತುಂಗಾ ಶಿವಲಿಂಗಯ್ಯ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

ಧ್ವನಿ– ತುಂಗಾ(30 ಸೆಕೆಂದುಗಳು)

<><><>

ಈಗ ಪ್ರಕಟಣೆ.

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

<><><>

( 42 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಗಣತಂತ್ರ ದಿನವಾದ ಇಂದು, ನಾಡಿನ ಎಲ್ಲ ಜಿಲ್ಲಾ ಕೇಂದ್ರಗಳ ಮೂಲಕ ರಾಷ್ಟ್ರಧ್ವಜರೋಹಣಗೈದು, ಗೌರವ ಸಲ್ಲಿಸಲಾಗುತ್ತದೆ. ಸ್ವದೇಶಿ ಖಾದಿ ಬಟ್ಟೆ, ರಾಷ್ಟ್ರಧ್ವಜ ತಯಾರಿಸುವಲ್ಲಿ ಸುದೀರ್ಘ ಇತಿಹಾಸ ಹೊಂದಿರುವ ಧಾರವಾಡ ಜಿಲ್ಲೆಯ ಗರಗ ಗ್ರಾಮ ಹಾಗೂ ಹುಬ್ಬಳ್ಳಿಯ ಬೆಂಗೇರಿ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮುಂಚೂಣಿಯಲ್ಲಿವೆ. ಈ ಕುರಿತು ಒಂದು ವರದಿ.

1957 ರಲ್ಲಿ ಆರಂಭಗೊಂಡ,ಧಾರವಾಡ ಜಿಲ್ಲೆ, ಹುಬ್ಬಳ್ಳಿ ಬೆಂಗೇರಿಯ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘಕ್ಕೆ ಭಾರತದ ರಾಷ್ಟ್ರಧ್ವಜ ನಿರ್ಮಾಣದಲ್ಲಿ ವಿಶೇಷ ಸ್ಥಾನವಿದೆ. ದೇಶದ ತ್ರಿವರ್ಣ ಧ್ವಜಗಳನ್ನು ತಯಾರಿಸಲು ಹಾಗೂ ಪೂರೈಸಲು ಅಧಿಕಾರ ಹೊಂದಿರುವ ದೇಶದ ಏಕೈಕ ಅಧಿಕೃತ ಘಟಕ ಎಂಬ ಖ್ಯಾತಿ ಹೊಂದಿದೆ. ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್– ಬಿ.ಐ.ಎಸ್ ಪರವಾನಗಿ ಪಡೆದಿರುವ ಈ ಕೇಂದ್ರದಲ್ಲಿ ಕೈಮಗ್ಗದ ಮೂಲಕ ಸಿದ್ಧಪಡಿಸಿದ ರಾಷ್ಟ್ರಧ್ವಜಗಳನ್ನು ತಯಾರಿಸಿ, ಮಾರಾಟ ಮಾಡಲಾಗುತ್ತದೆ. ಧಾರವಾಡ ತಾಲೂಕು, ಗರಗ ಗ್ರಾಮವು ರಾಷ್ಟ್ರಧ್ವಜ ತಯಾರಿಕೆಗೆ ಅಗತ್ಯವಾದ ಖಾದಿ ಬಟ್ಟೆಗಳನ್ನು ಪೂರೈಸುತ್ತದೆ. ಧಾರವಾಡದ ರಾಷ್ಟ್ರಧ್ವಜ ನಿರ್ಮಾಣ ಪರಂಪರೆ ಹಾಗೂ ಪ್ರಾಮುಖ್ಯತೆ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಗರಗ ಕ್ಷೇತ್ರೀಯ ಖಾದಿ ಸಂಘದ ಅಧ್ಯಕ್ಷ ಬಸವಪ್ರಭು ಹೊಸಕೇರಿ

<><><>

ಧ್ವನಿ –ಬಸವಪ್ರಭು ಹೊಸಕೇರಿ (120 ಸೆಕೆಂದುಗಳು)

<><><>

ಬೆಂಗಳೂರಿನ ಮಾಣಿಕ್ ಾ ಕವಾಯತು ಮೈದಾನ ಸೇರಿದಂತೆ, ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ರಾಷ್ಟ್ರ ಧ್ವಜಾರೋಹಣಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇಂದು ಬೆಳಗ್ಗೆ 9 ಗಂಟೆಗೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಬಳಿಕ ಶಾಲಾ–ಕಾಲೇಜು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

<><><>

ಪ್ರಸಕ್ತ ಸಾಲಿನ ಪದ್ಮಶ್ರೀ ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದ್ದು, ಕರ್ನಾಟಕದ ಮೂವರು ಸೇರಿದಂತೆ, ಒಟ್ಟು 54 ಗಣ್ಯರಿಗೆ ಪುರಸ್ಕಾರ ಘೋಷಿಸಲಾಗಿದೆ. ರಾಜ್ಯದ ಪುಸ್ತಕ ಪ್ರೇಮಿ, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಅಂಕೇಗೌಡ, ದಾವಣಗೆರೆಯ ವೈದ್ಯ ಡಾಕ್ಟರ್ ಸುರೇಶ ಹನಗವಾಡಿ ಹಾಗೂ ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ಎಸ್.ಜಿ.ಸುಶೀಲಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟಿಸಲಾಗಿದೆ. ದೇಶದ ಇತರ ಭಾಗಗಳ ಪ್ರಮುಖ ಸಾಧಕರ ಪಟ್ಟಿಯಲ್ಲಿ ಮಹಾರಾಷ್ಟ್ರದ ನವಜಾತ ಶಿಶು ತಜ್ಞೆ ಅರ್ಮಿದಾ ಫೆರ್ನಾಂಡಿಸ್ ಗಮನ ಸೆಳೆದಿದ್ದಾರೆ. ಇವರು ಭಾರತದ ಮೊದಲ ಮಾನವ ಹಾಲಿನ ಬ್ಯಾಂಕ್ ಸ್ಥಾಪಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

<><><>

ಹಿರಿಯ ಪತ್ರಕರ್ತ, ಲೇಖಕ,ಇತಿಹಾಸಕಾರ ಮಾರ್ಕ ಟುಲಿ ಹೊಸದಿಲ್ಲಿಯಲ್ಲಿ ನಿಧನರಾದರು, ಅವರಿಗೆ 90 ವರ್ಷ ವಯಸ್ಸಾಗಿತ್ತು. 1974 ರ ವರೆಗೆ 22 ವರ್ಷಗಳ ಕಾಲ, ಅವರು ಬಿಬಿಸಿ ರೇಡಿಯೊದಲ್ಲಿ ನಿರೂಪಕರಾಗಿ ಸೇವೆ ಸಲ್ಲಿಸಿದ್ದರು. ಭಾರತೀಯ ರೇಲ್ವೆ ಕುರಿತ ಸಾಕ್ಷ್ಯಚಿತ್ರವನ್ನು ನಿರ್ಮಿಸಿದ್ದರು. ಮಾರ್ಕ ಟುಲಿ ಅವರ ನಿಧನಕ್ಕೆ ಶಾಸಕ ಸುರೇಶ ಕುಮಾರ. ಎಸ್ ಕಂಬನಿ ಮಿಡಿದಿದ್ದಾರೆ.

<><><>

ಧಾರವಾಡ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಇಂದು ಬೆಳಗ್ಗೆ 10.30 ಕ್ಕೆ, 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಹುತಾತ್ಮ ದಿನಾಚರಣೆ'ಯನ್ನು ಧಾರವಾಡ ಜಿಲ್ಲಾಧಿಕಾರಿಗಳ ನೂತನ ಸಭಾಭವನನದಲ್ಲಿ ಆಯೋಜಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

- 'ರಾಷ್ಟ್ರ ಮೊದಲು' ಎಂಬ ಮನೋಭಾವದೊಂದಿಗೆ ಒಟ್ಟಾಗಿ ಕಾರ್ಯ ನಿರ್ವಹಿಸುವಂತೆ ರಾಷ್ಟ್ರಪತಿ ಜನತೆಗೆ ಕರೆ.
- ಶ್ರೇಷ್ಠತೆಗೆ ಪ್ರಾಶಸ್ತ್ಯ ನೀಡುವಂತೆ ನವೋದ್ಯಮಗಳಿಗೆ ಪ್ರಧಾನಮಂತ್ರಿ ಆಗ್ರಹ.
- 77ನೇ ಗಣರಾಜ್ಯೋತ್ಸವ; ನಾಡಿನೆಲ್ಲೆಡೆ ಸಂಭ್ರಮ. ಪ್ರಧಾನ ಸಮಾರಂಭಕ್ಕೆ ಸಜ್ಜಾದ ಬೆಂಗಳೂರಿನ ಮಾಣಿಕ್ ಾ ಪರೇಡ್ ಮೈದಾನ.
- ಪ್ರಸಕ್ತ ಸಾಲಿನ ಪದ್ಮಶ್ರೀ ಪ್ರಶಸ್ತಿ ಪ್ರಕಟ; ರಾಜ್ಯದ ಮೂವರು ಸೇರಿದಂತೆ, ಒಟ್ಟು 54 ಗಣ್ಯರಿಗೆ ಗೌರವ.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 7 ಗಂಟೆ 35 ನಿಮಿಷಕ್ಕೆ.

<><><>